ಇ) ಶಾಲೆಗಳಿಗೆ ಬೇಳೆ, ಎಣ್ಣೆ ಉಪ್ಪು ಸರಬರಾಜು ಮಾಡುವಲ್ಲಿ ಕಾರಣಾಂತರಗಳಿಂದ ವಿಳಂಬವಾಗುವ ಸಾಧ್ಯತೆಗೆ ಎದುರಾಗಿ ಶಾಲೆಗಳಲ್ಲಿ ಒಂದು ತಿಂಗಳ ಬಫರ್ ಸ್ಟಾಕ್ ಇರುವಂತೆ ಕ್ರಮ ವಹಿಸಲಾಗಿದೆ.

ಶಾಲೆಗಳ ಒಂದು ತಿಂಗಳ ಬಫರ್ ಸ್ಟಾಕ್ ಇರುವುದರಿಂದ ಶಾಲೆಗಳಿಗೆ ಎಣ್ಣೆ ಬೇಳೆ ಕಾಳುಗಳ ಸರಬರಾಜು ವಿಳಂಬವಾದರೂ ಸಹ ಬಿಸಿ ಊಟ ತಯಾರಿಕೆಗೆ ಯಾವುದೇ ತೊಂದರೆಯಾಗಿರುವುದಿಲ್ಲ.

ಒಂದು ವೇಳೆ ಬಫರ್ ಸ್ಟಾಕ್ ನಂತರವೂ ಕೆ.ಎಫ್.ಸಿ.ಎಸ್.ಸಿ. ಕಾರಣಾಂತರಗಳಿಂದ ಬೇಳೆ, ಎಣ್ಣೆ ಶಾಲೆಗಳಿಗೆ ಸರಬರಾಜು ಮಾಡಲು ವಿಳಂಬವಾದ ಸಂದರ್ಭಗಳಲ್ಲಿ ಶಾಲೆಯಲ್ಲಿ ಅಕ್ಷರ ದಾಸೋಹ ಕಾರ್ಯ ಕ್ರಮದ ಅನುಷ್ಠಾನಕ್ಕೆ ನೀಡಲಾದ ಅನುದಾನದಲ್ಲಿ ಸ್ಥಳೀಯವಾಗಿಯೇ ಶಾಲಾ ಹಂತದಲ್ಲಿ ಅಗತ್ಯ ಆಹಾರ ಧಾನ್ಯ/ಪದಾರ್ಥಗಳನ್ನು ಖರೀದಿಸಿ ಕಾರ್ಯಕ್ರಮ ವನ್ನು ಯಶಸ್ವಿಯಾಗಿ ನಡೆಸಲು ಸೂಕ್ತ ನಿರ್ದೇಶನ ನೀಡಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

506 (508) ಶ್ರೀ ಬಂಡೆಪ್ಪ ಖಾಶೆಂಪೂರ (ಬೀದರ್ ದಕ್ಷಿಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭ ಮಾಡಲಾಗಿದೆಯೇ; (ವರ್ಷವಾರು ಮತ್ತು ವಿಧಾನಸಭಾವಾರು ಮಾಹಿತಿ ನೀಡುವುದು);

ಆ) ಹೊಸದಾಗಿ ಪ್ರಾರಂಭವಾದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹಾಗೂ ವಿಧಾನಸಭಾವಾರು ಮಾಹಿತಿ ನೀಡುವುದು);

ಇ) ಹೊಸದಾಗಿ ಪ್ರಾರಂಭವಾದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು (ಪೂರ್ಣ ಮಾಹಿತಿ ನೀಡುವುದು);

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :

ಅ) 2010–11–ಗುಲ್ಬರ್ಗಾ(ಜಿ) ಚಿತ್ತಾಪುರ(ತಾ) ಮರ್ತೂರು–ಸರ್ಕಾರಿ ಕಾನೂನು ಕಾಲೇಜು

2011–12– ತುಮಕೂರು–ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಆ) ತುಮಕೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 17 ಭೋದಕರ ಹಾಗೂ 13 ಭೋದಕೇತರ ಹುದ್ದೆಗಳು ಮಂಜೂರಾಗಿರುತ್ತದೆ.

ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕು ಮರ್ತೂರು ಸರ್ಕಾರಿ ಕಾನೂನು ಕಾಲೇಜಿಗೆ 07 ಭೋದಕರ ಹಾಗೂ 07 ಭೋದಕೇತರ ಹುದ್ದೆಗಳು ಮಂಜೂರಾಗಿರುತ್ತದೆ.

ಇ) ಹೊಸದಾಗಿ ಪ್ರಾರಂಭವಾದ ಕಾಲೇಜುಗಳಿಗೆ ನಿವೇಶನ ಲಭ್ಯತೆ ಆಧಾರಿಸಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಅದೇ ರೀತಿ ತುಮಕೂರು ಪ್ರಥಮ ದರ್ಜೆ ಕಾಲೇಜಿಗೆ ರೂ.3.5 ಕೋಟಿಗಳಲ್ಲಿ ಕಟ್ಟಡ ಕಟ್ಟಲು ಅನುದಾನ ಹಂಚಿಕೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ದೈಹಿಕ ಶಿಕ್ಷಕರ ನೇಮಕಾತಿ

507 (509) ಶ್ರೀ ಬಂಡೆಪ್ಪ ಖಾಶೆಂಪೂರ (ಬೀದರ್ ದಕ್ಷಿಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ದೈಹಿಕ ಶಿಕ್ಷಕರ ನೇಮಕಾತಿ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೇಮಕಾತಿ ಮಾಡಲಾದ ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಇ) ಪ್ರಸ್ತುತ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು);